# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-9250/2017/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ:15-02-2018

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಪಾಪಣ್ಣ ಎಸ್ ತಂದೆ ಸುರೇಂದ್ರಪ್ಪ, ವಾಸ: ಮಾದನಾಯಕನಹಳ್ಳಿ ಗ್ರಾಮ ಮತ್ತು ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಪಾಪಣ್ಣ ಎಸ್ ತಂದೆ ಸುರೇಂದ್ರಪ್ಪ, ವಾಸ: ಮಾದನಾಯಕನಹಳ್ಳಿ ಗ್ರಾಮ ಮತ್ತು ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಶ್ರೀ ಬಸವರಾಜಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಮಾದನಾಯಕನಹಳ್ಳಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲುಕು ಮತ್ತು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ನನ್ನ ತಂದೆ ಸುರೇಂದ್ರಪ್ಪ ಬಿನ್ ಪಾಪಯ್ಯ ಇವರಿಗೆ ಮಾದನಾಯಕನಹಳ್ಳಿ ಗ್ರಾಮದಲ್ಲಿ ಪಂಚಾಯತಿ ವತಿಯಿಂದ 30*40 ಖಾಲಿ ನಿವೇಶನ ಮಂಜೂರು ಆಗಿರುತ್ತದೆ ಹಾಗೂ ಅದರ ಖಾತೆಯು ಸಹ ಆಗಿದೆ. ದಿನಾಂಕ: 13-3-2002 ರಂದು ನಮ್ಮ ತಂದೆ ಮರಣ ಹೊಂದಿದ್ದರಿಂದ ಪವತಿ ಖಾತೆಯನ್ನು ನಮ್ಮ ತಾಯಿಯ ಹೆಸರಿಗೆ ಮಾಡಿಸಲು ಅರ್ಜಿ ಕೊಟ್ಟು 10 ತಿಂಗಳಾಗಿದ್ದರೂ ಸಹ ನಮ್ಮ ತಾಯಿಯ ಹೆಸರಿಗೆ ಮಾಡಿಲ್ಲ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಿಗೆ ತಂದೆಗೆ ಸಂಬಂಧಿಸಿದ ಖಾತಾ ನಂ:586 ಶ್ರೀಮತಿ ಭಾಗ್ಯಮ್ಮ ಇವರ ಹೆಸರಿನಲ್ಲದೆ. ಆದ್ದರಿಂದ, ದೂರನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ನಾನು ದೂರು ಸಲ್ಲಿಸಿದ ನಂತರ ನಿವೇಶನವನ್ನು ನನ್ನ ತಾಯಿಯ ಹೆಸರಿಗೆ ಪವತಿ ಖಾತೆ ಮಾಡಿದ್ದಾರೆ, ಆದರೆ ಕರ ನಿರ್ಧರಣಾ ಪಟ್ಟಿ ನಮೂನೆ ನಂ:9 ಇ-ಸ್ವತ್ತಿನಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ಆದ್ದರಿಂದ, ನಾನು ಇ-ಸ್ವತ್ತು ಮಾಡಿಕೊಡಲು ಅರ್ಜಿಯನ್ನು ಸಲ್ಲಿಸಿದ್ದು, ಇನ್ನು ಸಹ ಮಾಡಿಕೊಟ್ಟಿಲ್ಲ ಅಂತ ನಮೂದಿಸಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ದಿನಾಂಕ: 18-12-2017 ರಂದು ಶ್ರೀಮತಿ ಭಾಗ್ಯಮ್ಮ ಇವರ ಮುಖಾಂತರ ಇ-ಸ್ವತ್ತಿನ ಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಈಗಾಗಲೇ ವಿವಾದಿತ ಆಸ್ತಿಯ ಖಾತೆಯು ದೂರುದಾರರ ತಾಯಿಯ ಹೆಸರಿನಲ್ಲಿ ಆಗಿರುವುದರಿಂದ, ಇ-ಸ್ವತ್ತು ಕೊಡುವುದು ಎದುರುದಾರರ ಕರ್ತವ್ಯವಾಗಿದೆ. ಆದ್ದರಿಂದ, ದೂರುದಾರರ ತಾಯಿಯ ಹೆಸರಿನಲ್ಲಿ ನಮೂನೆ ನಂ:9 ಇ-ಸ್ವತ್ತಿನಲ್ಲಿ ಸೇರ್ಪಡೆ ಮಾಡಿಕೊಡಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ